## 'ಸುಧಾ' ಫಲಶ್ರುತಿ!

ಸಾಮಾನ್ಯವಾಗಿ ಪತ್ರಿಕೆಗಳಲ್ಲಿ ವರದಿಯಾದ ಕುಂದುಕೊರತೆಗಳನ್ನು ಸಂಬಂಧಪಟ್ಟವರು ಗಮನಿಸಿ ಅದನ್ನು ಕೂಡಲೇ ಸರಿಪಡಿಸಲಾಗುತ್ತದೆ. ಸಮಸ್ಯೆ ಬಗೆಹರಿದಾಗ ಅಥವಾ ವರದಿ ಫಲಶ್ರುತಿ ಉಂಟುಮಾಡಿದ ಬೆರಗಿಗೆ ಧನ್ಯವಾದಗಳು.

ದಾವಣಗೆರೆ ಶಾಮನೂರು ರಸ್ತೆಯ ಸಿದ್ದವೀರಪ್ಪ ಬಡಾವಣೆಯಲ್ಲಿ ಬಾಪೂಜಿ ಸಮುದಾಯ ಭವನವಿದೆ. ಅದರ ಎದುರಿದ್ದ ವಿದ್ಯುತ್ ಕಂಬದ ಬೀದಿ ದೀಪಕ್ಕೆ ಅವೈಜ್ಞಾನಿಕವಾಗಿ ಮತ್ತು ಅಪಾಯಕಾರಿಯಾಗಿ ವಿದ್ಯುತ್ ತಂತಿಯನ್ನು ಅಳವಡಿಸಲಾಗಿತ್ತು. ಈ ಕುರಿತು 'ಸುಧಾ' ವಾರಪತ್ರಿಕೆಯ (8ನೇ ಸೆಪ್ಟೆಂಬರ್ 2022) ನಿಮ್ಮಪುಟ ವಿಭಾಗದಲ್ಲಿ ವರದಿಯಾಗಿತ್ತು. ವರದಿಯ ಬಳಿಕ ಎಚ್ಚೆತ್ತುಕೊಂಡಿರುವ ಸಂಬಂಧಪಟ್ಟ ಅಧಿಕಾರಿಗಳು ಅಪಾಯಕಾರಿ ವಿದ್ಯುತ್ ತಂತಿಗಳನ್ನು ತೆಗೆದು ಸುಸಜ್ಜಿತವಾಗಿ ಸ್ವಿಚ್ ಬಾಕ್ಸ್ ಅಳವಡಿಸಿದ್ದಾರೆ.

–ಸೌಮ್ಯಾ ಶಿಗ್ಗಾಂವಕರ್, ಹಾಸನ






## 43 ವರ್ಷಗಳ ಹಿಂದಿನ ಕಲಾಕೃತಿ



ಮೇಲುನೋಟಕ್ಕೆ ಇವು ಗೋಡೆ ಮೇಲೆ ತೂಗು ಹಾಕುವ ಮಾಮೂಲಿ ಫೋಟೊಗಳಂತೆ ಕಂಡರೂ ಇವು ತಯಾರಾಗುವ ಪ್ರಕ್ರಿಯೆಯೇ ರೋಚಕ. ಬೀಟೆ ಮರ ಮತ್ತು ಅಪ್ಪಟ ಶ್ರೀಗಂಧದ ಹಲಗೆಗಳ ಮೇಲೆ ಕಲ್ಪನೆಯ ಚಿತ್ರಗಳನ್ನು ಮೊದಲು ಬರೆಯಲಾಗುತ್ತದೆ. ಬಳಿಕ ಕಬ್ಬಿಣದ ಅತಿ ಸಣ್ಣ ಚೂಪಿನಿಂದ ಅಷ್ಟೇ ಸೂಕ್ಷ್ಮವಾಗಿ ಮರದ ಭಾಗವನ್ನು ಎಷ್ಟು ಬೇಕೋ ಅಷ್ಟು ಮಾತ್ರ ಆಕಾರಕ್ಕೆ ತಕ್ಕಂತೆ ತೆಳುವಾಗಿ ಕೆತ್ತಲಾಗುತ್ತದೆ. ಕೆತ್ತನೆಗೊಂಡ ಭಾಗಗಳಿಗೆ ಆನೆಯ ದಂತದ ಚೂರುಗಳನ್ನು ಅಂಟಿಸಿ ಕಲಾಕೃತಿ ರಚಿಸಲಾಗುತ್ತದೆ.

ಮೈಸೂರು ನಗರದ ಇರ್ವಿನ್ ರಸ್ತೆಗಳ ಉದ್ದಗಲಕ್ಕೂ ಗಂಧ, ದಂತದಿಂದ ರೂಪಿಸಿದ ಅಪರೂಪದ ಕಲಾಕೃತಿಗಳ ಕೈಗಾರಿಕೆಗಳು ಹೇರಳವಾಗಿವೆ! ಇಂತಹ ಕೃತಿಗಳಿಗೆ ಸಹಜವಾಗಿಯೇ ಹೆಚ್ಚಿನ ದರ ನಿಗದಿಪಡಿಸುತ್ತಾರೆ. ಅಂದ ಹಾಗೆ ಈ ಮೇಲಿನ ಎರಡು ಕಲಾಕೃತಿಗಳನ್ನು ಸುಮಾರು 43 ವರ್ಷಗಳ ಹಿಂದೆ ಮೈಸೂರಿನಲ್ಲಿ ಖರೀದಿಸಿದ್ದೆ. ಇಂದಿಗೂ ಹೊಚ್ಚ ಹೊಸದರಂತೆ ಗೋಡೆ ಮೇಲೆ ಕಂಗೊಳಿಸುತ್ತಿವೆ ಶ್ರೀಗಂಧದ ಕಂಪನ್ನು ಸೂಸುತ್ತಾ!

–ಆರ್. ವೀರೇಶ್ ಕುಮಾರ್, ಬೆಂಗಳೂರು

## ಬಿಳಗಿಯ ಗೋಲಬಾವಿ

ಉತ್ತರಕನ್ನಡ ಜಿಲ್ಲೆಯ ಸಿದ್ದಾಪುರದಿಂದ ಕೇವಲ 15 ಕಿ.ಮೀ. ದೂರವಿರುವ ಬಿಳಗಿ ಪ್ರಸಿದ್ಧ ಐತಿಹಾಸಿಕ ಸ್ಥಳಗಳಲ್ಲಿ ಒಂದು. ಹಿಂದೆ ಬಿಳಗಿಯನ್ನಾಳುತ್ತಿದ್ದ ವಿಜಯನಗರದ ಸಾಮಂತರು ನಿರ್ಮಿಸಿದ ಗೋಲಬಾವಿ ಹಾಗೂ ಜೈನರ ಬಸದಿಗಳು ಇಲ್ಲಿನ ಪ್ರಮುಖ ಆಕರ್ಷಣೆ. ಗೋಲಬಾವಿಯ ನಾಲ್ಕು ದಿಕ್ಕುಗಳಲ್ಲಿ ಸುರಂಗಗಳಿದ್ದು, ಅವುಗಳನ್ನು ಈಗ ಸುರಕ್ಷಾ ದೃಷ್ಟಿಯಿಂದ ಮುಚ್ಚಲಾಗಿದೆ. ಇದು ಅರಸರು ಶತ್ರುಗಳಿಂದ ತಮ್ಮ ರಕ್ಷಣೆಗಾಗಿ ಸುರಂಗದ ಮೂಲಕ ಸುಮಾರು 10 ಕಿ.ಮೀ. ದೂರದ ಇಟಗಿ ಹಾಗೂ ಇತರೆ ಸ್ಥಳಗಳಿಗೆ ತಲುಪಲು ಮಾಡಿಕೊಂಡ ವ್ಯವಸ್ಥೆಯಾಗಿತ್ತೆಂಬುದು ಇತಿಹಾಸದಲ್ಲಿನ ಉಲ್ಲೇಖ. ಹಾಗೆಯೇ ಇಲ್ಲಿನ ಜೈನ ಬಸದಿಯು ಪ್ರಮುಖ ಆಕರ್ಷಣೆಗಳಲ್ಲಿ ಒಂದಾಗಿದೆ. ಭಾರತೀಯ ಪುರಾತತ್ವ ಇಲಾಖೆಯಡಿ ಬರುವ ಈ ದೇವಾಲಯ ಅಂದಿನ ವಾಸ್ತು ಶೈಲಿಯಲ್ಲಿ ನಿರ್ಮಿಸಲಾದ ಅತ್ಯಂತ ಸುಂದರ ತಾಣ. ಆದರೆ ಇಂತಹ ಸ್ಮಾರಕಗಳಿಗೆ ಯಾವುದೇ ಸೂಚನಾ ಫಲಕಗಳಿಲ್ಲ.

'ಈ ಸ್ಮಾರಕಗಳಿಗೆ ಸಂಬಂಧಿಸಿದಂತೆ ಒಂದೇ ಒಂದು ಸೂಚನಾ ಫಲಕವೂ ಇಲ್ಲ. ಈ ಬಗ್ಗೆ ಸ್ಥಳೀಯ ಪಂಚಾಯಿತಿಯ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ' ಎಂಬುದು ಸ್ಥಳೀಯರೊಬ್ಬರ ಮಾತು. ಮುಂದಾದರೂ ಸಂಬಂಧಪಟ್ಟ ಇಲಾಖೆ/ಪಂಚಾಯಿತಿಯವರು ಸೂಚನಾ ಫಲಕ ಹಾಕಿಸುವ ಮೂಲಕ ಪ್ರವಾಸಿಗರಿಗೆ ಅನುಕೂಲ ಮಾಡುವರೇ? ಕಾದು ನೋಡಬೇಕು.

–ಪಿ.ಹೆಚ್. ಪಾಟೀಲ್, ರಾಣೆಬೆನ್ನೂರ



